ಅಂತ ಸಂದೇಹ ವ್ಯಕ್ತಪಡಿಸಿದ ಕೋಣದ ಬೈರ. 'ಎರಡೇ ಆಗ್ಲಿ ಬಿಡು, ಇಪ್ಪತ್ತು ದಿನ ಆಲೇಮನೆಯಲ್ಲಿರಬೇಕಾಗ್ತದೆ ಅಂತಾನಾ? ಮತ್ತೂ ನಾಕು ದಿನ ಜಾಸ್ತಿಯಾಗ್ಲಿ ತಗಾ, ನಂಗೇನವಸರವಿಲ್ಲ' ಅಂದರು ರಾಮಣ್ಣ. ಅದರಲ್ಲೇ ಖುಷಿ ಅನ್ನುವಂತಿತ್ತು ದನಿ.

ನೆಂಟರು ಬೀಗರಿಗೆಲ್ಲ ಸುದ್ದಿ ಕಳಿಸಿದ್ದರು. ನೆಟ್‌ವರ್ಕ್ ಸಿಕ್ಕಾಗ ಮಾತಾಡಿ ಕರೆದರು. ಅವರೆಲ್ಲ ಬರತೊಡಗಿದರು. ಅಕ್ಕಪಕ್ಕದ ಊರವರು, ಪರಿಚಯದವರು ಬರತೊಡಗಿದರು. ಚಪ್ಪರದಲ್ಲಿ ಹಾಸಿದ ಕಂಬಳಿಯಮೇಲೆ ಜನ ಬೇಕೆನಿಸಿದಂತೆ ಕಾಲುನೀಡಿ, ಅರ್ಧ ಒರಗಿಕೊಂಡು, ಪದ್ಮಾಸನದಲ್ಲಿ ಕುಳಿತು ಹೇಗೆಲ್ಲ ಹಿತ ಅನುಭವಿಸುತ್ತಿದ್ದರು. ಕಬ್ಬಿನ ಹಾಲು ಕುಡಿಸದೆ ಕಳಿಸುತ್ತಿರಲಿಲ್ಲ. ಒಂದು ಗ್ಲಾಸು ಸಾದಾಹಾಲು, ಆಮೇಲೆ ಕಬ್ಬಿನತುದಿ ಸಿಗಿದು ಹಸಿಶುಂಠಿ ಸಿಕ್ಕಿಸಿ ಗಾಣದಲ್ಲಿ ಹಿಂಡಿದ್ದು. ಕೆಲವರು ವಿಶೇಷ ಆಸಕ್ತರಿಗೆ ಹಸಿಮೆಣಸು ಸೇರಿಸಿದ ಖಾರಖಾರನ ಹಾಲು, ಲಿಂಬೆ ಹಿಂಡಿದ್ದು. ಕ್ರಮೇಣ ಜನರಿಗೆ ಈ ಮರದಗಾಣದಲ್ಲಿ ತೆಗೆದ ಹಾಲಿನಲ್ಲಿ ವಿಶೇಷ ಸ್ವಾದದ ಅನುಭವವಾಗತೊಡಗಿ, ಅದಕ್ಕೆಲ್ಲ ಮರ ತನ್ನ ಔಷಧಗುಣವನ್ನು ಹಾಲಲ್ಲಿ ಸೇರಿಸುತ್ತಿರುವುದೇ ಕಾರಣ ಅನ್ನಿಸಿ, ಒಳ್ಳೇ ಆರೋಗ್ಯ ಈ ಕಬ್ಬಿನ ಹಾಲು ಎಂಬ ಅಭಿಪ್ರಾಯ ಪುಷ್ಟಿ ಪಡೆಯಿತು. ದಿನಾ ಹಗಲೊತ್ತು ಹಾಲು ಕುಡಿಯಲು ಜನ ತುಂಬತೊಡಗಿದರು. ಹಗಲಲ್ಲಿ ತೆಗೆದ ಮುಕ್ಕಾಲುಪಾಲು ಹಾಲು ಹೀಗೆ ಜನ ಕುಡಿದು, ಅವರಿವರಿಗೆಲ್ಲ ಹಂಚಿ ಖಾಲಿಯಾಗುತ್ತಿತ್ತು. ರಾತ್ರಿಯ ಒಂದೆಸರು ಬೆಲ್ಲವಾಗುತ್ತಿತ್ತು. 'ಹೀಗೇ ಇರ್ಲಿ ಬಿಡೆ ಗೌರಾ, ಸಂಭ್ರಮ ತುಂಬಿ ಗಲಗಲ ಅಂತಾ ಇಲ್ಲವ ಇಲ್ಲೆಲ್ಲಾ? ನೆಂಟರು, ಗುರುತು ಪರಿಚಯದವರನ್ನೆಲ್ಲ ಏನು ಕೊಟ್ಟು ಒಟ್ಟುಹಾಕಲಾಗತಿತ್ತು ಹೀಗೆ?' ಅಂತ ಮುಖ ಅರಳಿಸಿಕೊಂಡರು. ಆಲೆಮನೆಯ ಅರ್ಧಫರ್ಲಾಂಗು ಪರಿಸರದಲ್ಲಿ ಬೆಲ್ಲ ಪಾಕವಾಗುವ ಮಧುರ ಕಂಪು ಸದಾ ಆವರಿಸಿಕೊಂಡಿತು. ಹಗಲಲೆಲ್ಲ ಜೇನ್ನೊಣಗಳು ಹಾಲು ಬೀಳುವ ಬಾನಿಯ ಕಂಠಕ್ಕೆ, ಹಿಂಡಿಹಾಕಿದ ಸಿಪ್ಪೆಗೆ, ಗಾಣದ ಬುಡದ ಒದ್ದೆಗೆ ಮುತ್ತಿಕೊಂಡು ತಂಬೂರಿಯ ಜೇಂಕಾರ ಮಾಡುತ್ತಿದ್ದವು. ಊಟಮಾಡಿದ ಮುಸುರೆಯಾಸೆಗೆ ಪಕ್ಕದ ಮರಗಳಿಗೆ ಕಾಗೆ ಭೆಟ್ಟಿಕೊಡುತ್ತಿತ್ತು. ಮೂರು ಜನರಿಗೆ ರಾತ್ರಿಯೂಟ ಚಪ್ಪರದಲ್ಲೇ. ಗೌರಕ್ಕನೂ ಸೇರಿಕೊಳ್ಳತೊಡಗಿದಳು. ಬೈರ, ಆಚಾರಿ ತಮ್ಮ ಅನುಭವಕ್ಕೆ ಬಂದದ್ದು, ಬಾಲ್ಯದಲ್ಲಿ ಕೇಳಿದ್ದು ನೆನಪಿಸಿಕೊಂಡು ಹೇಳುತ್ತಿದ್ದರು. ಭೂತ, ಜಟಕ, ಕಳ್ಳಕಾಕರ ಕತೆಗಳನ್ನು ಅದ್ಭುತವಾಗಿ ಬಿಚ್ಚಿಡುತ್ತಿದ್ದರು. ಅಡಕೆಸೋಗೆ ಚಪ್ಪರವನ್ನು ಆವರಿಸಿಕೊಂಡ ಇರುಳ ಕತ್ತಲೆಯಲ್ಲಿ ಬಿದಿರುಕಂಬಕ್ಕೆ ನೇತುಬಿದ್ದ ಲಾಟೀನಿನ ಅಶಕ್ತ ಬೆಳಕು ಒಲೆಯ ಬೆಂಕಿಸುಳಿಯ ಕೆಂಪು ಪ್ರಭೆಯೊಂದಿಗೆ ಸೃಷ್ಟಿಸುವ ವೇದಿಕೆಯಲ್ಲಿ ಈ ಎಲ್ಲಾ ಕಥಾನಕಗಳು ಹಲವು ಆಯಾಮ ಪಡೆದು ಬೇರೆಯೆ ಜಗತ್ತನ್ನು ಹುಟ್ಟುಹಾಕುತ್ತಿದ್ದವು. ರಾತ್ರಿ ಎದ್ದು ಪಾಕದ ಜೊಂಡು ತೆಗೆಯುತ್ತ ನಿಲ್ಲುತ್ತಿದ್ದ ಆಚಾರಿ ಕುದಿ ಬಂದು ಹದವಾದ ಕೂಡಲೇ ಎಲ್ಲರನ್ನು ಎಬ್ಬಿಸುತ್ತಿದ್ದ. ಕೊಪ್ಪರಿಗೆಯ ಎರಡು ಬಳೆಯಲ್ಲಿ ಗಳ ಸೇರಿಸಿ ರಾಮಣ್ಣ ಮತ್ತು ಬೈರ ಎತ್ತಿದರೆ ಮುತ್ತಾಚಾರಿ ಮೂರನೆ ಬಳೆ ಹಿಡಿದು ಸಮತೋಲ ಕಾದು ಕೊಪ್ಪರಿಗೆಯಿಳಿಸಿ ಆಮೇಲೆ ಪಾಕದ ಮರಿಗೆಗೆ ಬಗ್ಗಿಸಿಕೊಂಡರೆ ರಾತ್ರಿಯ ಕೆಲಸ ಮುಗಿದಹಾಗೆ. ಕಬ್ಬಿನ ಹಸಿರು ಗರಿ, ಬಿಳಿಹುಲ್ಲು ತಿನ್ನುತ್ತ ಎದುರು ಸುರಿದ ಬೆಲ್ಲದ ಸಿಹಿಜೊಂಡು ನೆಕ್ಕುವ ಕೋಣ ಮೂಲೆಯಲ್ಲಿ ನಿಲ್ಲುವುದು ಮಲಗುವುದು ಮಾಡುತ್ತಿರುತ್ತಿತ್ತು.

ದಿನಕಳೆದಂತೆ ಸುದ್ದಿ ಇನ್ನೂ ವ್ಯಾಪಿಸಿತು. ತಾಲ್ಲೂಕು ಕೇಂದ್ರದ ಪತ್ರಿಕೆಯೊಂದು ಮರದ ಗಾಣದ ಫೋಟೊ ತೆಗೆದು ರಾಮಣ್ಣನವರ ಅಭಿರುಚಿಯನ್ನೂ ಮುತ್ತಾಚಾರಿಯ ಕೌಶಲ್ಯವನ್ನೂ